ಅ) ತೊಡಗಿಸಿದ ಹಣ ರೂ ೮೬,೦೧,೪೫೯–೦೦ ಒಟ್ಟು ಆದಾಯ ರೂ ೪೩,೨೪, ೬೭೨–೦೦

ಇ) ಒಟ್ಟು ನಷ್ಟ ರೂ ೪೨,೭೬,೭೬೭–೦೦

ಈ) ಹೌದು ಯೋಚಿಸಿದೆ.

ಈ ಕ್ಷೇತ್ರವನ್ನು ನಾನಾ ವಿಧದಲ್ಲಿ ಅಭಿವೃದ್ಧಿ ಪಡಿಸಲು ತಜ್ಞ ಯೋಜನೆಯನ್ನು (ಮಾಸ್ಟರ್ ಪ್ಲಾನ್ (ಸಿದ್ಧಪಡಿಸಲಾಗಿದೆ. ಈ ಯೋಜನೆಯಲ್ಲಿ ಮುಖ್ಯವಾಗಿ

೧ ಮಿಶ್ರತಳಿ ಹಸುಗಳನ್ನು ಸಮುದ್ರ ತೀರದ ಹವಾಮಾನಕ್ಕೆ ಹೊಂದಿಕೊಳ್ಳುವಂತೆ ಅಭಿವೃದ್ಧಿ ಪಡಿಸುವುದು.

೨ ಹೆಚ್ಚಿನ ಮಿಶ್ರತಳಿ ಕಡಸುಗಳನ್ನು ಅಭಿವೃದ್ಧಿ ಪಡಿಸಿ ನಾನಾ ಸಾಮಾಜಿಕ ಆರ್ಥಿಕ ಯೋಜನೆಯ ಮುಖಾಂತರ ದುರ್ಬಲ ವರ್ಗದವರಿಗೆ ಒದಗಿಸುವ ಕಾರ್ಯಕ್ರಮ.

೩ ನಗರಗಳಿಗೆ ಸಾಕಷ್ಟು ಹಾಲು ಪೂರೈಕೆ ಯೋಜನೆ.

೪ ಹೆಚ್ಚಿನ ಪ್ರಮಾಣದಲ್ಲಿ ಸುಧಾರಿತ ತಳಿ ಹುಲ್ಲನ್ನು ಉತ್ಪಾದಿಸುವುದು ಮತ್ತು ಬೀಜ ಹಾಗೂ ಬೇರಿನ ತುಂಡನ್ನು ಉತ್ಪಾದನೆಗಾಗಿ ರೈತರಿಗೆ ಒದಗಿಸುವುದು.

೫ ರೈತರಿಗೆ ಪಶು ಸಾಕಣಿಕೆ ಮತ್ತು ಆರೋಗ್ಯಕರವಾದ ಹೆಚ್ಚಿನ ಹಾಲು ಉತ್ಪಾದನೆ ಬಗ್ಗೆ ತರಬೇತಿ ಕೊಡುವುದು.

ಶ್ರೀ ಕೆ. ರಾಮಭಟ್.—ಸ್ವಾಮಿ, ಈ ಕೇಂದ್ರವನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ? ಮತ್ತು ಮಾಸ್ಟರ್‌ಪ್ಲಾನ್ ಮಾಡಿದ್ದೇವೆಂದು ಹೇಳಿದ್ದೀರಿ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ ? ಈ ವರ್ಷದ ಬಜೆಟ್ಟಿನಲ್ಲಿ ಎಷ್ಟು ಹಣ ಒದಗಿಸಿದ್ದೀರಿ ? ಈ ಸಂಸ್ಥೆ ನಷ್ಟದಲ್ಲಿ ನಡೆಯುವುದನ್ನು ತಡೆಗಟ್ಟಲು ಬೇರೆ ಸಂಸ್ಥೆಯವರಿಗೆ ವಹಿಸಿಕೊಡುತ್ತೀರಾ ?

ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್.—ಬೇರೆ ಸಂಸ್ಥೆಯವರಿಗೆ ವಹಿಸಿಕೊಡುವ ವಿಚಾರವನ್ನು ಪರೀಶಿಲನೆ ಮಾಡುತ್ತೇನೆ.

ಶ್ರೀ ಕೆ. ರಾಮಭಟ್.—ಮಾಸ್ಟರ್‌ಪ್ಲಾನ್ ತಯಾರಿಸಿದ್ದೀರಿ; ಅದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ

ಶ್ರೀ ವಿಶ್ವನಾಥ್‌ರೆಡ್ಡಿಮುದ್ನಾಳ್.—ಅದರ ವಿವರ ನನ್ನ ಹತ್ತಿರ ಈಗ ಇಲ್ಲ.

ಡಾ।। ವಿ. ಎಸ್. ಆಚಾರ್ಯ.—ಸ್ವಾಮಿ ಕೊಯಿಲಾ ಪಶುಸಂಗೋಪನಾ ಕೇಂದ್ರ ಸುಮಾರು ೮೦ ಎಕರೆ ಪ್ರದೇಶದಲ್ಲಿದೆ. ಇದರ ಅಭಿವೃದ್ಧಿಗಾಗಿ ಮಾಸ್ಟರ್‌ಪ್ಲಾನ್ ಮಾಡಿದ್ದೇವೆಂದು ಹೇಳಿದ್ದೀರಿ ಬಹಳ ಸಂತೋಷ. ಇದನ್ನು ಬೇರೆ ಬೇರೆ ಸಂಪನ್ಮೂಲಗಳಿಂದ ದುಡ್ಡನ್ನು ತೆಗೆದುಕೊಂಡು ಅಭಿವೃದ್ಧಿ ಪಡಿಸುವುದಕ್ಕೆ ತೀವ್ರ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಪ್ರಯತ್ನ ಮಾಡೋಣ.

MR. SPEAKER—Question hour is over.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಗ್ರಾಮಾಂತರ ನೀರು ಸರಬರಾಜು ಯೋಜನೆ ಮೇರೆಗೆ ಕಡೂರು ತಾಲ್ಲೂಕಿನ ಗ್ರಾಮಂಗಳಿಗೆ ನೀರು ಸರಬರಾಜು

೪೨೧ (೯೪೧) ಶ್ರೀ ಎನ್.ಕೆ. ಹುಚ್ಚಪ್ಪ (ಕಡೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಡೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳಿಗೆ ಗ್ರಾಮಾಂತರ ನೀರು ಸರಬರಾಜು ಯೋಜನೆಯ ಮೇರೆಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ ?

ಆ) ಆ ಹಳ್ಳಿಗಳಲ್ಲಿ ಚೆನ್ನಾಗಿ ನಡೆಯುತ್ತಿರುವವೆಷ್ಟು ಮತ್ತು ನಿಂತಿರುವ ಹಳ್ಳಿಗಳೆಷ್ಟು ?

ಇ) ಅಸಂದಿ ಗ್ರಾಮದಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆ ಮಂಜೂರು ಮಾಡಿಲ್ಲವೇ ?

ಈ) ಹಾಗಿದ್ದಲ್ಲಿ ಆ ಗ್ರಾಮಕ್ಕೆ ನೀರು ಒದಗಿಸಲು ಸರ್ಕಾರದವರು ಯಾವ ಕ್ರಮ ತೆಗೆದು ಕೊಂಡಿರುವರು ?

ಉ) ೧೯೮೨-೮೩ನೇ ಸಾಲಿನಲ್ಲಿ ಮಂಜೂರಾದ ಹಳ್ಳಿಗಳೆಷ್ಟು ಮತ್ತು ಯಾವ ಯಾವ ಹಳ್ಳಿ ಗಳಲ್ಲಿ ಸದರಿ ಕೆಲಸಗಳನ್ನು ಮುಗಿಸಲು ಸರ್ಕಾರದವರು ಕ್ರಮ ತೆಗೆದುಕೊಂಡಿರುತ್ತಾರೆ,

ಊ) ೧೯೮೪-೮೫ನೇ ಸಾಲಿನಲ್ಲಿ ಎಷ್ಟು ಹಳ್ಳಿಗಳನ್ನು ಸದರಿ ಕೆಲಸಗಳಿಗೆ ಸರ್ಕಾರದವರು ತೆಗೆದುಕೊಂಡಿರುತ್ತಾರೆ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಕಡೂರು ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳಿಗೆ ನಳದ ಮೂಲಕ ನೀರನ್ನು ಒದಗಿಸುವ ಯೋಜನೆಗಳನ್ನು ಆಳವಡಿಸಲಾಗಿದೆ,
ಸಕ್ರಿಪಟ್ನ, ಪಂಚನಹಳ್ಳಿ, ಹಿರೇನಲ್ಲೂರು, ಯಗಟಿ, ಮತಿಗಟ್ಟ, ಯಲ್ಲಂಬಳಸೆ, ಬನ್ನೂರುಗೂಪ್, ಚಾಳಹಿರಿಯೂರು, ನಾಗೇನಹಳ್ಳಿ, ಹಿಳ್ಳೇನಹಳ್ಳಿ, ಹುಲಿಕೆರೆ, ಬಿಲವಾಳ, ಬಿಸ್ಲೆಹಳ್ಳಿ, ಗನಗನಹಳ್ಳಿ, ಪುರ, ಚಿಕ್ಕನಲ್ಲೂರು, ಕಡೂರಹಳ್ಳಿ, ದೊಗರೆಹಳ್ಳಿ, ನಿಡುವಳ್ಳಿ, ದೇವನೂರು, ಅಸಂದಿ, ಕೇತೂಮಾರನಹಳ್ಳಿ, ಮಲ್ಲೇಶ್ವರ, ನಿಡುಗಟ್ಟ, ಸರಸ್ವತಿಪುರ, ಪಟ್ಟಣಗೆರೆ, ಚಿಕ್ಕಪಟ್ಟಣಗೆರೆ, ಕಲಕೆರೆ, ಯರದಕೆರೆ.

ಆ) ಒಟ್ಟು ೨೯ ಯೋಜನೆಗಳು ಕಾರ್ಯ ನಿರ್ವಹಿಸುತ್ತಿದ್ದು ಒಂದು ಯೋಜನೆ ಮಾತ್ರ ಸ್ಥಗಿತಗೊಂಡಿದೆ.

ಇ) ಹೌದು. ೧೯೭೨-೭೩ರಲ್ಲಿ ಮಂಜೂರಾಗಿದೆ.

ಈ) ಜೂನ್ ೧೯೭೮ರಂದು ಈ ಯೋಜನೆಯನ್ನು ಪೂರ್ಣಗೊಳಿಸಲಾಗಿತ್ತು. ದಿನಾಂಕ ೨೩-೧-೮೨ರಿಂದ ಈ ಯೋಜನೆಯು ಸ್ಥಗಿತಗೊಂಡಿದೆ. ಈ ಯೋಜನೆ ಯನ್ನು ಪುನರ್‌ರಚಿತಗೊಳಿಸಲು ಒಂದು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಆದಷ್ಟು ಬೇಗ ಈ ವಿಷಯವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಉ) ೧೯೮೨-೮೩ರಲ್ಲಿ ಯಗಟಿ ಮತ್ತು ಮತಿಗಟ್ಟ ಗ್ರಾಮಗಳಿಗೆ ಅಭಿವೃದ್ಧಿ ಯೋಜನೆಗಳು ಮಂಜೂರಾಗಿದೆ. ಇವುಗಳ ಅಂದಾಜಿಗೆ ಮಂಜೂರಾತಿ ಪಡೆವ ಕಾರ್ಯ ಪ್ರಗತಿಯಲ್ಲಿದೆ.

ಊ) ಎರಡು ಯೋಜನೆಗಳು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪಾವಗಡದಲ್ಲಿರುವ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆಗಳು

೮೨೮ (೧೧೯೫) ಶ್ರೀ ಉಗ್ರನರಸಿಂಹಪ್ಪ (ಪಾವಗಡ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪಾವಗಡ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಎಂದಿನಿಂದ ಖಾಲಿ ಇದೆ ?